# ಗಂಡಿಲ ಓಬವ್ವ ನಾಗತಿ: ಸಾಹಿತ್ಯ ಮತ್ತು ಚರಿತ್ರೆಯ ಹಿನ್ನೆಲೆಯಲ್ಲಿ ಒಂದು ಅಧ್ಯಯನ

ದೇವೇಂದ್ರಪ್ಪ ಕೆ.

ಸಂಶೋಧನಾ ವಿದ್ಯಾರ್ಥಿ, ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ,
ತುಮಕೂರು ವಿಶ್ವವಿದ್ಯಾಲಯ, ತುಮಕೂರು.

DOI: https://doi.org/10.5281/zenodo.17013555

## ABSTRACT:

ಭಾರತದ ಚರಿತ್ರೆಯನ್ನು ಅಧ್ಯಯನದ ದೃಷ್ಟಿಯಲ್ಲಿ ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಿ ನೋಡಬಹುದು. ಒಂದು ಉತ್ತರ ಭಾರತದ ಚರಿತ್ರೆ, ಮತ್ತೊಂದು ದಕ್ಷಿಣ ಭಾರತದ ಚರಿತ್ರೆ. ಉತ್ತರ ಭಾರತ ಮತ್ತು ದಕ್ಷಿಣ ಭಾರತದಲ್ಲಿ ಅನೇಕ ಅರಸುಮನೆತನಗಳು, ಸಾಮಂತರಾಜರುಗಳು, ಸಣ್ಣಪುಟ್ಟ ಪಾಳೆಯಗಾರರು ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದ ಪ್ರಮುಖ ಅರಸುಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯವೂ ಒಂದು. ಈ ಸಾಮ್ರಾಜ್ಯವು 1565 ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ಸೋಲನ್ನು ಕಂಡು ಪತನವಾಗುತ್ತದೆ. ಆನಂತರ ಅನೇಕ ಸಣ್ಣ ರಾಜ್ಯಗಳು ಉದಯಿಸಿದವು. ಅವುಗಳಲ್ಲಿ ಮೈಸೂರು ಸಂಸ್ಥಾನ, ಕೆಳದಿ ನಾಯಕರು, ಚಿತ್ರದುರ್ಗದ ಪಾಳೆಯಗಾರರು ಹಾಗೂ ಮುಂತಾದವರು ಕಂಡುಬರುತ್ತಾರೆ. ಹೀಗೆ ಕನ್ನಡ ನಾಡಿನಲ್ಲಿ ಅನೇಕ ರಾಜಮನೆತನಗಳು, ಸಾಮಂತರಾಜರುಗಳು ಹಾಗೂ ಪಾಳೆಯಗಾರರು ಆಳ್ವಿಕೆ ನಡೆಸಿದ್ದಾರೆ. ಈ ಆಳ್ವಿಕೆಯಲ್ಲಿ ರಾಜರುಗಳ ಪಾರುಪತ್ಯ ಹೆಚ್ಚಿರುವುದನ್ನು ಗುರುತಿಸಬಹುದು. ರಾಜನೇ ಸರ್ವಾಧಿಕಾರಿಯಾಗಿರುತ್ತಾನೆ. ರಾಜರು ಗತಿಸಿದಾಗ ಮತ್ತೊಬ್ಬರು ಪಟ್ಟಕ್ಕೆ ಬರುವವರೆಗೂ, ಮತ್ತು ಪಟ್ಟಾಭಿಷಕ್ತನಾಗಿರುವ ವ್ಯಕ್ತಿ ಚಿಕ್ಕವನಾಗಿದ್ದರೆ, ಆ ಸಂದರ್ಭದಲ್ಲಿ ರಾಣಿಯರು ಅಧಿಕಾರ ವಹಿಸಿಕೊಂಡ ನಿದರ್ಶನಗಳು, ಆಳ್ವಿಕೆಗೈದ ವಿವರಗಳು ಚರಿತ್ರೆಯಿಂದ ಕಂಡುಬರುತ್ತವೆ.

ಕರ್ನಾಟಕದ ಚರಿತ್ರೆಯನ್ನು ಅಧ್ಯಯನ ಮಾಡಿದಾಗ ಅನೇಕ ವೀರ ಪುರುಷರು ಕಾಣಸಿಗುತ್ತಾರೆ. ಅಂತೆಯೇ ಕೆಲವು ವೀರ ಮಹಿಳೆಯರೂ ಕಂಡುಬರುತ್ತಾರೆ. ಅವರುಗಳಲ್ಲಿ ಪ್ರಮುಖರೆನಿಸಿದ ಪೋರ್ಚುಗೀಸರ ಸದ್ದಡಗಿಸಿದ 'ರಾಣಿ ಅಬ್ಬಕ್ಕ', ಬ್ರಿಟಿಷರನ್ನ ನಡುಗಿಸಿ ಅವರ ವಿರುದ್ಧ ಹೋರಾಡಿದ 'ಕಿತ್ತೂರು ರಾಣಿ ಚೆನ್ನಮ್ಮ', ಕ್ರಿ.ಶ 1664 ರಿಂದ 1679 ರವರೆಗೆ ಕೆಳದಿಯ ಸಂಸ್ಥಾನವನ್ನು ಆಳಿದ 'ಕೆಳದಿ ಚೆನ್ನಮ್ಮ', 17 ನೇ ಶತಮಾನದಲ್ಲಿ ಶಿವಾಜಿ ಸೈನ್ಯವನ್ನು ಹಿಮ್ಮೆಟ್ಟಿಸಿದ 'ಬೆಳವಾಡಿ ಮಲ್ಲಮ್ಮ', ಹಾಗೂ 18 ನೇ ಶತಮಾನದಲ್ಲಿನ ಚಿತ್ರದುರ್ಗದ ಓನಕೆ ಓಬವ್ವ, ಈ ವೀರ ಮಹಿಳೆಯರಂತೆಯೇ ಚಿತ್ರದುರ್ಗದ ಮತ್ತೊರ್ವ ವೀರ ನಾಗತಿಯಾದ ಓಬವ್ವನಾಗತಿಯನ್ನು ಕಾಣಬಹುದು. ಇವರ ಕಾಲದಲ್ಲಿನ ಆಡಳಿತ,

ವೀರತ್ವ, ರಾಜಕೀಯದಲ್ಲಿನ ಚತುರತೆ ಅಥವಾ ನಿಪುಣತೆ ಮತ್ತು ಮುತ್ಸದ್ದಿತನ ಇವುಗಳಿಂದ ಓಬವ್ವನಾಗತಿಯು ವೀರ ಮಹಿಳೆಯಾಗಿ ಕಂಡುಬರುತ್ತಾಳೆ.

**KEYWORDS:**

ಓಬವ್ವ ನಾಗತಿ, ಮದಕರಿ ನಾಯಕ, ತ.ರಾ.ಸು, ಜಂಪಣ್ಣನಾಯಕನ ಕೈಫಿಯತ್ತು, ಲಕ್ಷ್ಮಣ್ ತೆಲಗಾವಿ, ಗೌಡನಹಳ್ಳಿ ಶಾಸನ.

**ಓಬವ್ವ ನಾಗತಿ ಯಾರು?**

ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಅನೇಕ ಪಾಳೆಪಟ್ಟುಗಳು ಸ್ವತಂತ್ರವಾಗಿ ಆಳ್ವಿಕೆ ನಡೆಸಿದವು. ಅವುಗಳಲ್ಲಿ ಚಿತ್ರದುರ್ಗವು ಒಂದು ಪ್ರಮುಖವಾದ ಪಾಳೆಪಟ್ಟು. ಚಿತ್ರದುರ್ಗದ ಪಾಳೆಯಗಾರರ ಮೂಲ ಪುರುಷ ಮತ್ತಿ ತಿಮ್ಮಣ್ಣ ನಾಯಕರನ್ನೊಳಗೊಂಡು ಒಟ್ಟು ಹದಿಮೂರು ಜನ ಪಾಳೆಗಾರರು ಆಳ್ವಿಕೆ ನಡೆಸಿದ್ದಾರೆ. ಇವರುಗಳಲ್ಲಿ ಪ್ರಮುಖನಾದ ಬಿಚ್ಚುಗತ್ತಿ ಭರಮಣ್ಣನಾಯಕನು ಆಳಿದ ನಂತರ, ಇವನ ಮಗನಾದ ಹನ್ನೊಂದನೇ ಪಾಳೆಗಾರನಾದ ಹಿರೇಮದಕರಿ ನಾಯಕನು ಕ್ರಿ.ಶ 1721 ರಿಂದ 1749 ರ ವರೆಗೆ ಚಿತ್ರದುರ್ಗವನ್ನು ಆಳಿದನು. ಆನೆಗೊಂದಿ ದೊರೆಯ ಮಗಳಾದ ಓಬವ್ವ ನಾಗತಿಯು ಹಿರೇಮದಕರಿ ನಾಯಕನಿಗೆ ಎರಡನೇ ಪತ್ನಿಯಾಗುವ ಮೂಲಕ ದುರ್ಗದ ನಾಗತಿಯಾದಳು. ಹಾಗೆ ಎರಡನೇ ಕಸ್ತೂರಿ ರಂಗಪ್ಪನಾಯಕನಿಗೆ ತಾಯಿಯಾಗಿ, ಚಿತ್ರದುರ್ಗದ ಪಾಳೆಗಾರರಲ್ಲಿ ವೀರ ನಾಗತಿಯಾಗಿ ಹಾಗೂ ರಾಜಮಾತೆಯಾಗಿ ಕಾಣಿಸಿಕೊಳ್ಳುತ್ತಾಳೆ.

**ರಾಜಮಾತೆಯಾಗಿ ಓಬವ್ವ ನಾಗತಿ:**

ಓಬವ್ವ ನಾಗತಿಯ ಗಂಡನಾದ ಹಿರೇಮದಕರಿ ನಾಯಕನು, ಮಾಯಕೊಂಡ ಯುದ್ಧದಲ್ಲಿ ವೀರಮರಣವನ್ನು ಹೊಂದಿದ ನಂತರ, ಇವನ ಮಗನಾದ ಎರಡನೇ ಕಸ್ತೂರಿ ರಂಗಪ್ಪ ನಾಯಕನು ಕ್ರಿ.ಶ 1749 ರಿಂದ 1754 ರ ವರೆಗೆ ಅಧಿಕಾರವನ್ನು ನಡೆಸುತ್ತಾನೆ. ಮುಂದೆ ಸಂತಾನವಿಲ್ಲದೆ ಮೃತನಾಗುತ್ತಾನೆ.“ಕಸ್ತೂರಿ ರಂಗಪ್ಪನಾಯಕನಿಗೆ ಸಂತಾನವಿಲ್ಲವಾದುದರಿಂದ ಯಾರಿಗೆ ಪಟ್ಟಾಭಿಷೇಕ ಮಾಡಬೇಕು ಎಂಬ ವಿಷಯದಲ್ಲಿ ಚರ್ಚೆ ಬಂತು. ಕಸ್ತೂರಿ ರಂಗಪ್ಪನಾಯಕನ ತಾಯಿ ಓಬಳಮ್ಮ ನಾಗತಿ, ಮುರಗಿಸ್ವಾಮಿಗಳು, ಸಕಲ ದಳವಾಯಿಗಳು, ಪ್ರಧಾನಿಗಳು, ಬಲನಾಯಕರು, ಗುರಿಕಾರರು, ರಾಹುತ, ಠಾಣ್ಯದ ಸೇರು, ವೇಳೆಗಾರರು, ಸಾಮಾಜಿಕರು, ಪೇಟೆ ಸೆಟ್ಟಿ, ಪಟ್ಟಣ ಸೆಟ್ಟಿ ಮುಂತಾದ ಪ್ರಮುಖ ವರ್ತಕರು ಸಹಾ ಸಭೆ ಸೇರಿ ಆಲೋಚನೆ ಮಾಡಿ, ಜಾನಕಲ್ಲು ಹೊಸದುರ್ಗದ ಸೇನಾಪತಿಯಾಗಿಯೂ ಹಿರೀ ಮದಕರಿನಾಯಕನ ತಮ್ಮನಾಗಿಯೂ ಇದ್ದ ದಂಡಿನ ಜಂಪಣ್ಣನಾಯಕನ ಕುಮಾರ ಭರಮಪ್ಪನಾಯಕನಿಗೆ

ಪಟ್ಟಾಭಿಷೇಕ ಮಾಡಬೇಕೆಂದು ನಿಶ್ಚಯಿಸಿದರು."[1] ಆದರೆ ಓಬವ್ವ ನಾಗತಿ ಮರುದಿನ ಪುನಃ ಸಭೆ ಕರೆದು ತನ್ನ ಸ್ವಪ್ನದಲ್ಲಿ ಹಿರಿಮದಕರಿ ನಾಯಕರು ಬಂದು "ನಾನು ಈ ಭೂಮಿಯ ಮೇಲೆ ಜಾನಕಲ್ಲು ದುರ್ಗದ ತೊದಲು ಭರಮಣ್ಣನಾಯಕನ ಹೊಟ್ಟೆಯಲ್ಲಿ ಮದಕರಿ ನಾಯಕನೆಂಬ ನಾಮಧೇಯದಿಂದ ಅವತರಿಸಿದ್ದೇನೆ, ಈತನಿಗೆ ಪಟ್ಟಾಭಿಷೇಕವಾಗಬೇಕು"[2] ಎಂದು ಹೇಳಿದರು ಎಂಬುದಾಗಿ ತಿಳಿಸಿದಳು. ಈ ಮಾತನ್ನು ಸಭೆಯೂ ಸ್ವಾಗತಿಸಿ ಜಾನಕಲ್ಲು ದುರ್ಗಕ್ಕೆ ಆನೆಯನ್ನು ಕಳುಹಿಸಿ ತೊದಲು ಭರಮಣ್ಣನಾಯಕನ ಮಗನಾದ ಮದಕರಿ ನಾಯಕನನ್ನು ಉತ್ಸವದ ಮೂಲಕ ದುರ್ಗಕ್ಕೆ ಕರೆತರಲಾಯಿತು. ಹನ್ನೆರಡು ವರ್ಷದ ಬಾಲಕನಾದ ಚಿಕ್ಕಮದಕರಿ ನಾಯಕ ಅಥವಾ ಕಡೆ ಮದಕರಿ ನಾಯಕನನ್ನು ಕ್ರಿ.ಶ 1754 ಜುಲೈ 1 ರಂದು ಬರಿದಾದ ದುರ್ಗದ ಸಿಂಹಾಸನಕ್ಕೆ ಕೂರಿಸಲಾಯಿತು. ಇಲ್ಲಿಂದ ಓಬವ್ವ ನಾಗತಿಯು ಎರಡು ವರ್ಷಗಳ ಕಾಲ, ಅಂದರೆ 1754 ರಿಂದ 1756 ರ ವರೆಗೆ, ಚಿತ್ರದುರ್ಗದ ನಾಗತಿಯಾಗಿ ಅಧಿಕಾರ ನಡೆಸಿದಳು ಎಂದು ತಿಳಿದುಬರುತ್ತದೆ. ಈ ಅವಧಿಯಲ್ಲಿ ಓಬವ್ವ ನಾಗತಿಯು ಓರ್ವ ರಾಜಕೀಯ ಮುತ್ಸದ್ದಿಯಾಗಿ, ದುರ್ಗದ ಪ್ರಧಾನಿಯಾದ ಕಳ್ಳಿ ನರಸಪ್ಪ ಮತ್ತು ಇತರೆ ಸೇನಾ ಮುಖ್ಯಸ್ಥರೊಂದಿಗೆ ರಾಜಕೀಯದ ವರ್ತಮಾನ ಸ್ಥಿತಿಗತಿಗಳನ್ನು ಚರ್ಚಿಸುತ್ತ, ಆಡಳಿತದಲ್ಲಿ ಸ್ವ ನಿರ್ಧಾರಗಳನ್ನು ತೆಗೆದುಕೊಳ್ಳಲು ಮುಂದಾದಳು. ಬಾಲಕನಾದ ಚಿಕ್ಕಮದಕರಿ ನಾಯಕನಿಗೆ ರಾಜನೀತಿಗಳನ್ನು ಹಾಗೂ ರಾಜಕೀಯದ ಚತುರತೆಯನ್ನು ಕಲಿಸುವ ನಿಪುಣತೆಯನ್ನು ಹೊಂದಿದ ಚಾಣಾಕ್ಷ ನಾಗತಿಯಾಗಿ ಕಂಡುಬರುತ್ತಾಳೆ. ಚಿಕ್ಕಮದಕರಿ ನಾಯಕನಿಗೆ ತರೀಕೆರೆ ಸರ್ಜಾ ಹನುಮಪ್ಪ ನಾಯಕರ ಮಗಳಾದ ಲಕ್ಕಾಂಬೆಯನ್ನು ಮದುವೆ ಮಾಡಿಸುತ್ತಾಳೆ. ಆನಂತರ ಮದಕರಿ ನಾಯಕ ಮತ್ತು ಲಕ್ಕಾಂಬಿಕೆಯ ನಡುವೆ ವೈವಾಹಿಕ ಬದುಕಿನಲ್ಲಿ ಹೊಂದಾಣಿಕೆ ಇಲ್ಲದ್ದನ್ನು ತಿಳಿದು ಗುಡೆಕೋಟೆಯ ಪದ್ಮವ್ವ ನಾಗತಿಯನ್ನು, ಜರಿಮಲೆಯ ಬಂಗಾರವ್ವ ನಾಗತಿಯರನ್ನು ಮದಕರಿ ನಾಯಕನೊಂದಿಗೆ ವಿವಾಹ ಮಾಡಿಸುತ್ತಾಳೆ. ನಂತರ ಚಿತ್ರದುರ್ಗದ ಅರಸನ ಸ್ಥಾನ ತನ್ನ ಮಗನ ಕೈತಪ್ಪಿದ್ದ ಕಾರಣ ಬೇಸರದಲ್ಲಿದ್ದ ಜಂಪಣ್ಣನಾಯಕನನ್ನು ಕರೆಸಿ, ಹಿರಿತನಕೊಟ್ಟು ಪಾಳೆಯಗಾರರ ವಂಶ ಕುರಿತು ಅಭಿಮಾನ ಮತ್ತು ಗೌರವಯುತವಾದ ಮಾತುಗಳನ್ನು ಆಡಿ, ಅಸಮಾಧಾನವನ್ನು ಕರಗಿಸಿ, ಜಾನಕಲ್ಲು ದುರ್ಗದಲ್ಲಿ ತೆರವಾದ ದಳವಾಯಿ ಪಟ್ಟವನ್ನು ಜಂಪಣ್ಣನಾಯಕನ ಮಗನಾದ ಭರಮಣ್ಣನಾಯಕನಿಗೆ ನೀಡುವಲ್ಲಿ ಪ್ರಧಾನಿಗಳ ನೆರವಿನಿಂದ ಸಫಲಳಾಗುತ್ತಾಳೆ.

**ರಾಯದುರ್ಗದ ಕದನದಲ್ಲಿ ಓಬವ್ವ ನಾಗತಿ:**

ಒಂದು ದಿನ ರಾತ್ರಿ ದುರ್ಗದ ಬತೇರಿಯಿಂದ ಕಹಳೆಯ ಸದ್ದು ಎಲ್ಲರನ್ನು ನಿದ್ದೆಯಿಂದ ಎಚ್ಚರಿಸಿತ್ತು. ದಳವಾಯಿಗಳು ಹಾಗೂ ಪ್ರಮುಖ ಸೇನಾ ಮುಖ್ಯಸ್ಥರು

ಚಾವಡಿಗೆ ಬರುವ ವೇಳೆಗೆ ಆಗಲೇ ಪ್ರಧಾನಿ ನರಸಪ್ಪಯ್ಯ ದೀರ್ಘಾಲೋಚನೆ ಮಾಡುತ್ತ ಕಾಯುತ್ತಿರುತ್ತಾನೆ. ಅಲ್ಲಿಗೆ ಬಂದ ದಳವಾಯಿ ಭರಮಣ್ಣನಾಯಕ ಏನು ಸಮಾಚಾರ ಎಂದು ಕೇಳಿದಾಗ, "ನನ್ನಿವಾಳದ ಗುಡ್ಡದ ಮೇಲೆ ಬೆಂಕಿ ಕಾಣಿಸಿಕೊಂಡಿತಂತೆ, ಕಹಳೆಯ ಬತೇರಿಯ ಆಳು ಸೂಚನೆ ಕೊಟ್ಟು ಹೋದ ಕೂಡಲೇ ಕಹಳೆ ಊದಿಸಲು ಹೇಳಿದೆವು"[3] ಎಂದರು ಪ್ರಧಾನಿ ನರಸಪ್ಪಯ್ಯ. ನನ್ನಿವಾಳ ಗುಡ್ಡ ಎಂದರೆ ರಾಯದುರ್ಗದ ಕಡೆಯಿಂದಲೋ ಅಥವಾ ನಿಡುಗಲ್ಲಿನ ಕಡೆಯಿಂದಲೋ ದುರ್ಗಕ್ಕೆ ಅಪಾಯದ ಸೂಚನೆ ಎಂದು ಭಾವಿಸಿ ಬೆಳಗನ್ನು ಕಾಯುವರು. ರಾಜಸಭೆಯಲ್ಲಿ ಮಾರಯ್ಯ ಎಂಬುವವನು ಮಾಸ್ವಾಮಿ, ರಾಯದುರ್ಗದ ಜನ ನಮ್ಮ ಗಡಿಯ ಒಳಗೆ ಮೇಯುತ್ತಿದ್ದ ನಮ್ಮ ಹಸು ಕರುಗಳನ್ನು ಕದ್ದು ಯುದ್ಧಕ್ಕೆ ಕರೆದಿದ್ದಾರೆ. ಅಷ್ಟೆ ಅಲ್ಲ ಮಾಸ್ವಾಮಿ, "ದುರ್ಗಕ್ಕೀಗ ಗಂಡಸರ ದಿಕ್ಕಿಲ್ಲ. ಪಟ್ಟದ ಮೇಲೆ ಚೋಟುದ್ದ ಹುಡುಗ, ಆಡಳಿತ ಮಾಡೋಳು ಮುದುಕಿ, ನಿಮ್ಮ ಕೈಲೇನಾದೀತು"[4] ಎಂದರು ಆ ಪೊಗರಿನ ಜನ ಹೇಳಿದ್ದನ್ನು ಹೇಳಿದ. ರಾಜಸಭೆಯಲ್ಲಿ ಸಿಟ್ಟು ಮತ್ತು ರೋಷದಿಂದ ಗದ್ದಲ ಉಂಟಾಗುತ್ತದೆ. ಆಗ ಓಬವ್ವ ನಾಗತಿಯು ಗದ್ದಲವನ್ನಡಗಿಸಿ "ಆಳುತ್ತಿರುವವರು ಹೆಂಗಸರು, ಪಟ್ಟದ ದೊರೆ ಹುಡುಗ ಎಂದರಲ್ಲವೇ ಆ ಹೇಡಿ ತುರುಗಳ್ಳರು. ನಿಜ, ಇಂಥ ಹೊತ್ತಿನಲ್ಲಿ ಶತ್ರುಗಳ ಕೋಳಿಯ ಪುಕ್ಕಕ್ಕೆ ಗರುಡ ರೆಕ್ಕೆಯ ಬಲ ಬರುತ್ತದೆ. ಎಂಜಲು ನೆಕ್ಕುವ ನಾಯಿಗೆ ದೇವರ ಎಡೆಯಲ್ಲಿ ನಾಲಿಗೆ ಚಾಚಬೇಕು ಅನಿಸುತ್ತದೆ. ಇದು ನಿಮಗಲ್ಲ, ನಮಗೆ ಸವಾಲು. ಈ ಬಾರಿಯ ರಣವೀಳ್ಯವನ್ನು ನಾವು ಯಾರಿಗೂ ಕೊಡುವುದಿಲ್ಲ. ನಾವೇ ತೆಗೆದುಕೊಂಡಿದ್ದೇವೆ. ನಮ್ಮ ಹಸು ಕದ್ದವರನ್ನು ಹಿಡಿದೆಳೆದು ತಂದು, ನಮ್ಮ ಅರಮನೆಯ ಗೋದಲಿಯಲ್ಲಿ ಕಟ್ಟದಿದ್ದರೆ ನಾವು ಗಂಡುಗಲಿ ಮದಕರಿನಾಯಕರ ಮಡದಿಯಲ್ಲ."[5] ಎಂದು ತುಂಬಿದೋಲಗದಲ್ಲಿ ವೀರಾವೇಶದ ಶಪಥಗೈಯ್ಯುತ್ತಾಳೆ.

ಹಿರಿಯ ನಾಗತಿಯೂ, ಚಿಕ್ಕಮದಕರಿ ನಾಯಕರೂ ಈ ಕದನದಲ್ಲಿ ತಮ್ಮ ತಲೆಗಳನ್ನು ಪಣಕ್ಕಿಟ್ಟು ಮುಂದಾಳತ್ವ ತೆಗೆದುಕೊಂಡದ್ದನ್ನು ಕಂಡು ದುರ್ಗದ ಸಕಲ ಸೈನ್ಯಾಧಿಕಾರಿಗಳು ಮತ್ತು ದಳವಾಯಿಗಳು ಮುಂದೆ ಬಂದು ಈ ಎರಡು ತಲೆಗಳಿಗೆ ಏನೂ ಆಗದಂತೆ ಜಾಗ್ರತೆಯಿಂದ ಶತ್ರು ಪಡೆಯನ್ನು ಗೆಲ್ಲಲು ಯೋಜನೆ ರೂಪಿಸುತ್ತ, ಈ ಯುದ್ಧ ಎರಡು ಅಥವಾ ಹೆಚ್ಚೆಂದರೆ ಮೂರು ದಿನಗಳ ಮಿಂಚಿನ ವೇಗದಲ್ಲಿ ಮುಕ್ತಾಯವಾಗಬೇಕು ಎಂದು ಸಿದ್ಧರಾದರು. ಇತ್ತ "ನಾಗತಿಯವರೇ ತಮ್ಮ ಕಾವಲುಪಡೆಯ ಹೆಣ್ಣುಗಳೊಡನೆ ಯುದ್ಧಕ್ಕೆ ಹೋಗಲಿದ್ದಾರೆಂಬ ಸುದ್ದಿಯನ್ನು ಕೇಳಿದ ಗ್ರಾಮದ ಸ್ತ್ರೀಯರೂ ಯಾರೂ ಕೇಳದೆಯೇ, ಹೇಳದೆಯೇ ಒಂದೊಂದು ಮನೆಯವರೂ, ಹತ್ತು ಜನಕ್ಕಾಗುವಷ್ಟು ರೊಟ್ಟಿಯ ಬುತ್ತಿಗಳನ್ನು ಕಟ್ಟಿಕೊಂಡಿದ್ದಲ್ಲದೆ, ತಾವೇ ಕೈಗೆ ಸಿಕ್ಕ ಹಾರೆ, ಒನಕೆ, ಬೀಸುವ ಕಲ್ಲಿನ ಗೂಟ, ಅದು ಇಲ್ಲದಿದ್ದವರು ಹಸು

ಹಿಡಿದ ರಾಯದುರ್ಗದವರ ಗಂಡಸುತನಕ್ಕೆ ಪೂಜೆ ಮಾಡಬೇಕೆಂದು ಕೈಗೆ ಸಿಕ್ಕ ತುಂಡು ಪೊರಕೆಗಳನ್ನು ಹಿಡಿದು, ವೀರಗಚ್ಚೆ ಹಾಕಿದ ಸೀರೆಯನ್ನುಟ್ಟು, ಮನೆ ಗ್ರಾಮಗಳನ್ನು ವೃದ್ಧರ ಕಾವಲಿಗೊಪ್ಪಿಸಿ ಹೊರಟುಬಂದರು ನಾಗತಿಯ ಬೆಂಬಲಕ್ಕೆ"[6] ಎಂದು ಬಂದ ಸೇನಾ ಸಮೂಹವು ರಾಯದುರ್ಗದ ಗಡಿ ಗ್ರಾಮಗಳನ್ನು ಮುತ್ತಿಗೆ ಹಾಕುತ್ತ ವೀರಾವೇಶದಿಂದ ಓಬವ್ವ ನಾಗತಿಯ ಸೈನ್ಯ ಮುನ್ನುಗ್ಗಿತು. "ಅಶ್ವಾರೋಹಿಣಿಯಾಗಿ, ಬಿಚ್ಚಿದ ಬಿಳಿಗೂದಲು ರಾಯದುರ್ಗದವರ ಪತನಕ್ಕಾಗಿ ಮೂಡಿದ ಧೂಮಕೇತುವಿನಂತೆ ಆಡುತ್ತಿರಲು, ಕಡಿ, ಬಡಿ, ಕೊಲ್ಲು ಎಂದು ಕೂಗುತ್ತಾ, ಬೀಸಿದ ಕತ್ತಿಗೆ ಅಡ್ಡವಾದ ತಲೆ, ಕೈಕಾಲುಗಳನ್ನು ಕತ್ತರಿಸುತ್ತಾ, ಉಟ್ಟ ಬಟ್ಟೆ ಶತ್ರು ರಕ್ತದಲ್ಲಿ ತೊಯ್ದು ರಣಗಾಳಿಯ ರಕ್ತಾಂಬರದಂತೆ ಕಂಡವರ ಎದೆ ನಡುಗಿಸುತ್ತಿರಲು ಮಹಿಷಾಸುರ ಮರ್ದಿನಿಯಂತೆ ಮುನ್ನುಗ್ಗಿದ ಓಬವ್ವ ನಾಗತಿಯನ್ನು ಕಂಡು ಮದಕರಿನಾಯಕನ ತೋಳುಗಳಲ್ಲೂ ಮಿಂಚು ಸಂಚರಿಸಿ, ಬಿರುಗಾಳಿಯಂತೆ ನುಗ್ಗುವ ಅಶ್ವವು ತನ್ನ ವೇಗಕ್ಕೆ ಸಾಲದೆಂಬಂತೆ, ಕುದುರೆಯಿಂದ ಧುಮುಕಿ, ಕೈಯಲ್ಲಿ ಹಿಡಿದ ಎಂಟಲಗಿನ ಪರಿಘವನ್ನು ಚಕ್ರಾಕಾರವಾಗಿ ತಿರುಗಿಸಿ ಹೊಯ್ದು, ಕಡಿದುಬಿದ್ದ ಶತ್ರು ಸೈನಿಕರನ್ನೇ ಮೆಟ್ಟಿಲಾಗಿ ಮಾಡಿಕೊಂಡು, ಬೆಟ್ಟದ ನಡುಭಾಗದಲ್ಲಿದ್ದ ರಾಯದುರ್ಗದ ನಾಯಕರ ಮನೆ ದೇವತೆಯಾದ ಪಟ್ಟದ ಎಲ್ಲಮ್ಮನ ಗುಡಿಯ ಮುಂದಿನ ಕಲ್ಲಾನೆಯನ್ನು ಏರಿ"[7]ದನು. ಇತ್ತ ಓಬವ್ವ ನಾಗತಿಯ ವೀರಾವೇಶದ ಸೈನ್ಯದ ಪರಾಕ್ರಮವನ್ನು ಕಂಡು ರಾಯದುರ್ಗದ ಕೃಷ್ಣಪ್ಪ ನಾಯಕನು ತನ್ನ ರಾಣಿಯರ ನಿವಾಸದ ಗುಪ್ತದ್ವಾರದ ಮೂಲಕ ಹರಪನಹಳ್ಳಿಯ ದಾರಿ ಹಿಡಿದು ತಲೆಮರೆಸಿಕೊಂಡನು. "ರಾಯದುರ್ಗದವರು ಮಾಡಿದ ಹಸುಗಳ್ಳತನದ ಪಾಪ ಅವರನ್ನು ತಿಂದಿತು. ನಮ್ಮ ಸೇನೆ ಆ ಪಾಪ ಮಾಡಕೂಡದು. ಹಸುಗಳು, ಹೆಂಗಸರು ಎಂದೂ ನಮ್ಮ ಶತ್ರುಗಳಲ್ಲ. ನಮ್ಮ ಮಕ್ಕಳೆಂದೂ ಆ ಪಾಪ ಮಾಡಕೂಡದು"[8] ಎಂಬ ಓಬವ್ವ ನಾಗತಿಯ ಮಾತು ಅವಳ ವೀರ ಪರಾಕ್ರಮದ ಜೊತೆಗೆ ದಯೆ, ಕರುಣೆ ಮತ್ತು ತನ್ನ ಯುದ್ಧದ ನೀತಿಯನ್ನು ಸಾರುತ್ತದೆ. ಹೀಗೆ ರಾಯದುರ್ಗ ಹಾಗೂ ಚಿತ್ರದುರ್ಗದ ಜನತೆಯ ಮನದಲ್ಲಿ ನೆಲೆಯೂರುವಂತೆ ತ.ರಾ.ಸು ಅವರು 'ದುರ್ಗಾಸ್ತಮಾನ' ಕಾದಂಬರಿಯಲ್ಲಿ ಓಬವ್ವ ನಾಗತಿಯ ಪಾತ್ರವನ್ನು ಚಿತ್ರಿಸಿದ್ದಾರೆ.

**ದುರ್ಗದ ನಾಗತಿಯರು (ಚಿತ್ರದುರ್ಗದ ಇತಿಹಾಸದಲ್ಲಿ ಮಹಿಳೆಯರು):**

ಟಿ. ಗಿರಿಜಾ ಅವರು ತಮ್ಮ 'ದುರ್ಗದ ನಾಗತಿಯರು' ಎನ್ನುವ ಕೃತಿಯಲ್ಲಿ ಓಬವ್ವ ನಾಗತಿಯನ್ನು ಕುರಿತಂತೆ ಅವರ ಕಾಲ, ಸ್ಥಾನಮಾನ, ಆಡಳಿತ ಮುಂತಾದ ವಿವರಗಳನ್ನು ದಾಖಲಿಸುವ ಜೊತೆಗೆ ಎರಡನೇ ಕಸ್ತೂರಿ ರಂಗಪ್ಪನಾಯಕನ ಮರಣದ ವಿವರಗಳನ್ನು ಉಲ್ಲೇಖ ಮಾಡಿದ್ದಾರೆ. "ದುರ್ಗದ ಸಿಂಹಾಸನದ ಮೇಲೆ ಕಣ್ಣು ಹಾಕಿದ್ದ, ಮೈದುನ ದಂಡಿನ ಜಂಪಣ್ಣನಾಯಕ ಮುಂತಾದವರು ಒಳಗೆ

ಪಿತೂರಿ ನಡೆಸಿ ರೋಗಪೀಡಿತರಾಗಿದ್ದ ರಂಗಪ್ಪನಾಯಕರಿಗೆ ಮೋಸದಿಂದ ವಿಷಪ್ರಾಶನ ಮಾಡಿಸಿದ್ದನ್ನು ತಿಳಿದ ಓಬವ್ವ ನಾಗತಿ ತಾವು ಮೋಸದಿಂದಲೇ ಜಂಪಣ್ಣನಾಯಕರಿಗೆ ವಿಷ ಉಣಿಸಬೇಕೆಂದು ಪ್ರಯತ್ನಿಸಿದಾಗ, ಮುದಿ ಭರಮಪ್ಪ ಮತ್ತು ಗುರುವಪ್ಪರು ಇದಕ್ಕೆ ಒಪ್ಪದೆ ಹೋದಾಗ, ನಾಗತಿ ಇವರಿಬ್ಬರ ತಲೆ ಹೊಡಿಸಿಬಿಟ್ಟಳು.''[9] ಮುಂದೆ ದುರ್ಗದ ಸಿಂಹಾಸನದಲ್ಲಿ ತನ್ನ ಸಹೋದರರಾದ ನರಸಪ್ಪ ಮತ್ತು ನೀಲಪ್ಪ ನಾಯಕರನ್ನು ನೋಡಲು ಹವಣಿಸಿದಳು. ಆದರೆ ದುರ್ಗದ ದಳವಾಯಿಗಳು ಇದನ್ನು ಒಪ್ಪಲಿಲ್ಲ ಎಂಬುದು ಕಂಡುಬರುತ್ತದೆ. ಹಾಗೂ ಓಬವ್ವ ನಾಗತಿಯು ಜಾನಕಲ್ಲಿನ ತೊದಲು ಭರಮಣ್ಣನಾಯಕನ ಹಿರಿಮಗನಾದ ಮದಕರಿ ನಾಯಕನನ್ನು ಪಟ್ಟಕ್ಕೆ ತರಲು ಕಾರಣ ''ಕಸ್ತೂರಿ ರಂಗಪ್ಪನಾಯಕರು ಮರಣಹೊಂದಿ ಒಂದು ರೀತಿಯ ಗೊಂದಲ ಮನಃಸ್ಥಿತಿ ಇದ್ದಾಗ ಒಮ್ಮೆ ಮಗ ಕನಸಿನಲ್ಲಿ ಬಂದು ವೀರಮದಕರಿಯನ್ನೇ ದೊರೆಯನ್ನಾಗಿ ಮಾಡುವಂತೆ ಹೇಳಿದಂತಾದ್ದರಿಂದ ಮದಕರಿಯನ್ನೇ ಪಟ್ಟಕ್ಕೆ ಕೂರಿಸಿ, ಮಗನ ಆಸೆಯನ್ನು ನೆರವೇರಿಸಿದ್ದಳು.''[10] ಎಂಬ ಉಲ್ಲೇಖಗಳು ಕಾಣಸಿಗುತ್ತವೆ. ಈ ಎರಡು ಉಲ್ಲೇಖಗಳನ್ನ ಕುರಿತು ಹಾಗೂ ಓಬವ್ವ ನಾಗತಿಯ ಬದುಕಿನ ಕೆಲವು ಸಂಗತಿಗಳನ್ನು, ಘಟನೆಗಳನ್ನು ಕುರಿತು ಚರಿತ್ರೆ ಭಿನ್ನವಾಗಿ ಹೇಳುತ್ತದೆ. ಆ ವಿವರಗಳನ್ನು ಮುಂದೆ ನೋಡೋಣ.

**ಜಂಪಣ್ಣನಾಯಕನ ಕೈಫಿಯತ್ತು/ದೊಡ್ಡಮದಕರಿನಾಯಕನ ಕೈಫಿಯತ್ತು:**

ಚಿತ್ರದುರ್ಗದ ಪಾಳೆಯಗಾರರ ಚರಿತ್ರೆಗೆ ಸಂಬಂಧಿಸಿದ ದಾಖಲೆಗಳಲ್ಲೊಂದಾದ ಈ ಜಂಪಣ್ಣನಾಯಕನ ಕೈಫಿಯತ್ತು/ದೊಡ್ಡಮದಕರಿ ನಾಯಕನ ಕೈಫಿಯತ್ತು, ಓಬವ್ವ ನಾಗತಿಯ ಆಡಳಿತದ ವ್ಯಕ್ತಿತ್ವವನ್ನು ಕುರಿತು ಹೇಳುವುದೇ ಬೇರೆ. ಉದಾಹರಣೆಗೆ ''ಗಂಡಿಲ ಓಬವ್ವಳೋರ್ವ ಕೊಲೆಪಾತಕಿ! ಕಸ್ತೂರಿ ರಂಗಪ್ಪನಾಯ್ಕರ ತಾಯಿ ವೋಬವ್ವ ನಾಗತಿ ಎಂಬಾಕೆ ಮಗ ಕಸ್ತೂರಿ ರಂಗಪ್ಪನಾಯ್ಕರಿಗೆ ವಿಷ ಹಾಕಿ ಕೊಲ್ಲಿಸಿದಳು''[11] ಎಂದು ಜಂಪಣ್ಣನಾಯಕನ ಕೈಫಿಯತ್ತು ಹೇಳುತ್ತದೆ.

**ಟಿ. ಜಯಣ್ಣ ಅವರ ಪ್ರತಿ:**

ಟಿ. ಜಯಣ್ಣ ಅವರ ಪ್ರತಿಯು ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಒಂದು ಬರವಣಿಗೆಯ ಪ್ರತಿಯಾಗಿದೆ. ''ಈ ಕಸ್ತೂರಿ ರಂಗಪ್ಪನಾಯಕನ ತಾಯಿ ವೋಬವ್ವ ನಾಗತಿ ತನ್ನ ತಮ್ಮಂದಿರಾದ ನರಸನಾಯ್ಕ, ನೀಲಪ್ಪನಾಯ್ಕರೆಂಬುವರ ಪೈಕಿ ಹಿರಿಯವನಿಗೆ ಪಟ್ಟಗಟ್ಟಿ ಮಗನನ್ನು ಮೈದುನನನ್ನು ವಿಷ ಹಾಕಿ ಕೊಲ್ಲಿಸಬೇಕೆಂತ....''[12] ಎಂದು ಈ ವಂಶವಾಳಿಯ ಪ್ರತಿಯು ಜಂಪಣ್ಣನಾಯಕನ ಕೈಫಿಯತ್ತಿಗೆ ಪೂರಕವಾಗಿ ಓಬವ್ವ ನಾಗತಿಯು ಓರ್ವ ಕೊಲೆಪಾತಕಿ ಎನ್ನುವುದಕ್ಕೆ ನಿದರ್ಶನವಾಗಿ ನಿಲ್ಲುತ್ತದೆ.

ದುರ್ಗದ ಹಿರಿಯ ಸಂಶೋಧಕರಾದ ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಈ ಮೇಲಿನ ಎರಡು ಬರವಣಿಗೆಯ ಪ್ರತಿಗಳನ್ನು ಅಧ್ಯಯನ ಮಾಡಿ ತಮ್ಮ 'ಸುಹೃದ ಸ್ಫುರಣ' ಎನ್ನುವ ಕೃತಿಯಲ್ಲಿ "ಇಮ್ಮಡಿ ಕಸ್ತೂರಿ ರಂಗಪ್ಪನಾಯಕನು ತನ್ನ ಸ್ವಂತ ಮಗನಾಗಿದ್ದರೂ ತಾಯಿಯಾಗಿದ್ದ ಗಂಡಿಲ ಓಬವ್ವ ನಾಗತಿಯು ಆತನನ್ನು ವಿಷವಿಕ್ಕಿ ಕೊಂದಳು ಅಥವಾ ಕೊಲ್ಲಿಸಿದಳೆಂಬುದು ಇಲ್ಲಿ ಸ್ಪಷ್ಟಪಡುವ ಅಂಶ."[13] ಎಂದಿದ್ದಾರೆ. ಮತ್ತೋರ್ವ ಹಿರಿಯ ಸಂಶೋಧಕರಾದ ಡಾ. ರಾಜಶೇಖರಪ್ಪ. ಬಿ ಅವರು ಎರಡನೇ ಕಸ್ತೂರಿ ರಂಗಪ್ಪನಾಯಕನ ಅಂತ್ಯ ಅಥವಾ ಮರಣವನ್ನು ಕುರಿತು 'ಇತಿಹಾಸ ಕಥನ'ದಲ್ಲಿ, ಈ ದೊರೆಯು ಅಸ್ವಸ್ಥತೆಯಲ್ಲಿ ಬಹುಶಃ ವಿಷಪ್ರಾಶನವೂ ಆಗಿ ಮರಣಿಸಿರಬಹುದು ಎಂಬ ಅಭಿಪ್ರಾಯವನ್ನು ತಾಳುತ್ತಾರೆ. ಆದರೆ ಯಾರಿಂದ ವಿಷಪ್ರಾಶನವಾಯಿತು ಎಂಬುದನ್ನು ಇವರು ಉಲ್ಲೇಖಿಸಿಲ್ಲ.

ಹೀಗೆ ಓಬವ್ವ ನಾಗತಿಯ ಬದುಕಿನ ವೃತ್ತಾಂತಗಳು ಸಾಹಿತ್ಯ ಮತ್ತು ಚರಿತ್ರೆಯಲ್ಲಿ ಅನಾವರಣಗೊಂಡಿವೆ. ತ.ರಾ.ಸು ಅವರು 'ದುರ್ಗಾಸ್ತಮಾನ' ಕಾದಂಬರಿಯಲ್ಲಿ ಓಬವ್ವ ನಾಗತಿಯನ್ನು ಕುರಿತ ಕಹಿ ಸತ್ಯಗಳನ್ನು ಹೊರಗಿಟ್ಟು ದಕ್ಷ ಆಡಳಿತಗಾರ್ತಿಯಾಗಿ ಹಾಗೂ ರಾಜತಾಂತ್ರಿಕ ನಿಪುಣತೆಯುಳ್ಳವಳಂತೆ ಚಿತ್ರಿಸಿದ್ದಾರೆ. ಬಹುಶಃ ತ.ರಾ.ಸು ಅವರು 'ದುರ್ಗಾಸ್ತಮಾನ' ಕಾದಂಬರಿಯ ರಚನೆಯ ಕಾಲಕ್ಕೆ ದೊರೆತ ಆಕರ ಸಾಮಗ್ರಿಗಳನ್ನು ಆಧರಿಸಿಕೊಂಡು ಅಧ್ಯಯನ ಮಾಡಿ ಚರಿತ್ರೆ ಗೌಣವಾಗಿರುವ ಕಡೆಯಲ್ಲಿ ಕೆಲವು ಮಾರ್ಪಾಡನ್ನು ಮಾಡಿರುವುದು ಕಂಡುಬರುತ್ತದೆ. ಆದರೆ ಇತ್ತೀಚೆಗಿನ ಸಂಶೋಧನಾ ಆಕರಗಳ ಲಭ್ಯತೆ ಮತ್ತು ಅಧ್ಯಯನದಿಂದ ತ.ರಾ. ಸು ಅವರ 'ದುರ್ಗಾಸ್ತಮಾನ'ದ ಓಬವ್ವ ನಾಗತಿಯು ಭಿನ್ನಳಾಗಿ ನಿಲ್ಲುತ್ತಾಳೆ. ಈ ರೀತಿಯ ಚಾರಿತ್ರಿಕ ವ್ಯಕ್ತಿಗಳ ವಿವರಗಳು ಮತ್ತು ಘಟನೆಗಳು ಈಗಿನ ಸಂಶೋಧಕರಿಗೆ, ಓದುಗರಿಗೆ ದ್ವಂದ್ವವಾಗಿ ಗೊಂದಲಗಳನ್ನುಂಟು ಮಾಡುತ್ತವೆ.

ಟಿ. ಗಿರಿಜಾ ಅವರ 'ದುರ್ಗದ ನಾಗತಿಯರು' ಎನ್ನುವ ಪುಸ್ತಕದಲ್ಲಿ ಎರಡನೇ ಕಸ್ತೂರಿ ರಂಗಪ್ಪನಾಯಕರ ಮರಣವನ್ನು ಕುರಿತು ಓಬವ್ವ ನಾಗತಿಯ ಮೈದುನನಾದ ಜಂಪಣ್ಣನಾಯಕ ಮತ್ತು ಇತರರು, ಕಸ್ತೂರಿ ರಂಗಪ್ಪನಾಯಕರಿಗೆ ಮೋಸದಿಂದ ವಿಷವಿಕ್ಕಿ ಕೊಲ್ಲಿಸಿದರು. ನಂತರ ಓಬವ್ವ ನಾಗತಿಯು ತನ್ನ ಮಗನನ್ನು ಕೊಂದವರನ್ನು ಮೋಸದಿಂದ ಕೊಲ್ಲಿಸಲು ಮುಂದಾದಳು. ಆದರೆ ಇದು ಸಾಕಾರವಾಗಲಿಲ್ಲ. ಇದಕ್ಕೆ ಅಡ್ಡಿಪಡಿಸಿದವರ ತಲೆಗಳನ್ನು ಹೊಡೆಸಿದಳು ಎಂದು ದಾಖಲಿಸಿದ್ದಾರೆ. ಆದರೆ ಜಂಪಣ್ಣನಾಯಕನ/ದೊಡ್ಡಮದಕರಿ ನಾಯಕನ ಕೈಫಿಯತ್ತಿನಲ್ಲಿ ಓಬವ್ವ ನಾಗತಿಯು ತನ್ನ ಸಹೋದರರ ಅಧಿಕಾರ ದೃಷ್ಟಿಯಿಂದ ತನ್ನ ಸ್ವಂತ ಮಗನನ್ನೇ ವಿಷವಿಕ್ಕಿ ಕೊಂದಳು ಅಥವಾ ಕೊಲ್ಲಿಸಿದಳು ಎಂದು ಹೇಳುತ್ತದೆ. ಮತ್ತೊಂದು ಬರವಣಿಗೆಯ ಆಕರ ಪ್ರತಿಯಾದ ಟಿ. ಜಯಣ್ಣ ಅವರ ಪ್ರತಿಯು ಈ ವಿಷಯಕ್ಕೆ ಪೂರಕವಾಗಿ

ಜಂಪಣ್ಣನಾಯಕನ ಕೈಫಿಯತ್ತನ್ನು ಅನುಸರಿಸುತ್ತದೆ. ಈ ವಿಚಾರವನ್ನು ಕುರಿತು ಸಂಶೋಧನೆಯ ಅಗತ್ಯವಿದೆ. ಹಾಗೆಯೇ 'ದುರ್ಗದ ನಾಗತಿಯರು' ಪುಸ್ತಕದಲ್ಲಿ ಮತ್ತೊಂದು ಗೊಂದಲವನ್ನುಂಟುಮಾಡುವ ಸಂಗತಿ ಎಂದರೆ, ಓಬವ್ವ ನಾಗತಿಯ ಕನಸಿನಲ್ಲಿ ತನ್ನ ಮಗನಾದ ಕಸ್ತೂರಿ ರಂಗಪ್ಪನಾಯಕನು ಬಂದು ಚಿಕ್ಕಮದಕರಿ ನಾಯಕನನ್ನು ದುರ್ಗದ ಸಿಂಹಾಸನಕ್ಕೆ ತರಲು ಹೇಳಿದ ಎಂಬ ಉಲ್ಲೇಖವು ಚರಿತ್ರೆಯಿಂದ ಹೊರಗುಳಿಯುತ್ತದೆ. ಮತ್ತು ಈ ವಿಷಯವನ್ನು ಇಲ್ಲಿಗೆ ಕೈಬಿಡುವುದು ಸೂಕ್ತ. ಏಕೆಂದರೆ ದುರ್ಗದ ಚರಿತ್ರೆಗೆ ಸಂಬಂಧಿಸಿದ ಮೊದಲ ಚಾರಿತ್ರಿಕ ಗ್ರಂಥವಾದ 'ಚಿತ್ರದುರ್ಗದ ಪಾಳೆಯಗಾರರು' ಎಂಬ ಕೃತಿಯಿಂದ ಹಿಡಿದು ಯಾವ ಗ್ರಂಥವೂ, ಟಿ. ಗಿರಿಜಾ ಅವರ ಈ ಉಲ್ಲೇಖದ ನೆರವಿಗೆ ನಿಲ್ಲುವುದಿಲ್ಲ. ಬದಲಿಗೆ ಓಬವ್ವ ನಾಗತಿಯ ಕನಸಿನಲ್ಲಿ ತನ್ನ ಗಂಡನಾದ ಹಿರೇಮದಕರಿ ನಾಯಕರು ಬಂದು "ನಾನು ಜಾನಕಲ್ಲಿನ ತೊದಲು ಭರಮಣ್ಣನಾಯಕನ ಹೊಟ್ಟೆಯಲ್ಲಿ ಮದಕರಿ ನಾಯಕನಾಗಿ ಹುಟ್ಟಿದ್ದೇನೆ" ಎಂದು ಹೇಳುತ್ತಾನೆ ಎಂಬುದು ಕಂಡುಬರುತ್ತದೆ.

**ಹೊರಕೆರೆ ದೇವಪುರದ ಶಿಲಾಶಾಸನ ಮತ್ತು ಓಬವ್ವ ನಾಗತಿ:**

ಈ ಶಿಲಾಶಾಸನದ ಕಾಲ 1754 ಎಂದು ತಿಳಿದುಬರುತ್ತದೆ. ಮತ್ತು ಎರಡು ವರ್ಷಗಳ ಕಾಲ ಅಧಿಕಾರ ನಡೆಸಿದ ಓಬವ್ವ ನಾಗತಿಯು ಚಿಕ್ಕಮದಕರಿ ನಾಯಕನೊಂದಿಗೆ ಹೊರಕೆರೆ ದೇವಪುರದ ರಂಗನಾಥ ಸ್ವಾಮಿಯನ್ನು ಪೂಜಿಸಿ ದತ್ತಿ ಬಿಟ್ಟ ವಿಷಯ ತಿಳಿದುಬರುತ್ತದೆ. ಇದರಿಂದ ಓಬವ್ವ ನಾಗತಿಯ ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು.

**ಗೌಡನಹಳ್ಳಿ ಶಾಸನ ಮತ್ತು ಓಬವ್ವ ನಾಗತಿ:**

ಓಬವ್ವ ನಾಗತಿಯು ತನ್ನ ಮಗನಾದ ಎರಡನೇ ಕಸ್ತೂರಿ ರಂಗಪ್ಪನಾಯಕನ ಮರಣದ ನಂತರ ದುರ್ಗದ ಸಿಂಹಾಸನದಲ್ಲಿ 12 ವರ್ಷದ ಬಾಲಕನಾದ ಚಿಕ್ಕಮದಕರಿ ನಾಯಕ (ವೀರಮದಕರಿ ನಾಯಕ) ನನ್ನು ಕೂರಿಸಿ ಎರಡು ವರ್ಷಗಳ ಕಾಲ ಆಳ್ವಿಕೆ ಮಾಡಿ ಮರಣವನ್ನಪ್ಪುವಳು. ನಂತರ "ತನ್ನ 'ತಾಯಿ' 'ಮಾತೋಶ್ರೀ ಓಬವ್ವ ನಾಗತಿ'ಯ ಹೆಸರಿನಲ್ಲಿ ತನ್ನ ಹಿರಿಯರಿಗೆ ಪುಣ್ಯವಾಗಬೇಕೆಂದು ವೀರಮದಕರಿಯು ಹಿರಿಯೂರು ತಾಲ್ಲೂಕು ಗೌಡನಹಳ್ಳಿಯನ್ನ, ಹಿರಿಯೂರಿನಲ್ಲಿ ಮಾಡಿಸಿದ ಅನ್ನಛತ್ರ ಮಠಕ್ಕೆ ದಾನಪೂರ್ವಕ ಬಿಟ್ಟುಕೊಡುತ್ತಾನೆ."[14] ಎಂಬುದನ್ನು ಲಕ್ಷ್ಮಣ್ ತೆಲಗಾವಿ ಅವರು 'ಸುಹೃದ ಸ್ಫುರಣ' ಪುಸ್ತಕದಲ್ಲಿ ದಾಖಲಿಸುತ್ತಾರೆ. ಆದರೆ ಗೌಡನಹಳ್ಳಿ ಶಾಸನವನ್ನು ರೈಸರು ಓದಿ ಅದರ ವಿವರಗಳನ್ನು ಬರಹದಲ್ಲಿ ದಾಖಲಿಸಿದ ನಂತರ ಸಂಶೋಧಕರಾದ ರಾಜಶೇಖರಪ್ಪ.ಬಿ ಅವರು ಮರು ಓದು ಅಥವಾ ಮರು ಅಧ್ಯಯನ ನಡೆಸಿ ಮದಕರಿ ನಾಯಕನು ಹಾಕಿಸಿದ ಗೌಡನಹಳ್ಳಿ ಶಾಸನದ

ವಿವರಗಳನ್ನು ಈ ರೀತಿ ಕೊಟ್ಟಿದ್ದಾರೆ, 'ಹಿರಿಯೂರಿನಲ್ಲಿ ಮಾಡಿಸಿದ ಅನ್ನಛತ್ರ ಮಠಕ್ಕೆ ಗೌಡನಹಳ್ಳಿಯನ್ನು ದಾನಪೂರ್ವಕ ಬಿಟ್ಟುಕೊಡುತ್ತಾನೆ. ಆದರೆ ಯಾರ ಹೆಸರಿನಲ್ಲಿ ಎಂಬುದು ಸ್ಪಷ್ಟವಾಗಿ ಕಂಡುಬರುವುದಿಲ್ಲ' ಎಂದು ಶಾಸನ ಪಾಠವನ್ನು ಹೀಗೆ ನೀಡುತ್ತಾರೆ. 'ಪೂ ಯವರ ಹೆಸರಲ್ಲು' ಎಂಬುದು ಓದುಗರಲ್ಲಿ ಗೊಂದಲವನ್ನುಂಟು ಮಾಡುತ್ತದೆ.

ಹೀಗೆ ಓಬವ್ವ ನಾಗತಿಯು ಸಾಹಿತ್ಯ ಕೃತಿಗಳಲ್ಲೂ, ಚಾರಿತ್ರಿಕ ಗ್ರಂಥಗಳಲ್ಲೂ ಹಾಗೂ ಶಾಸನ ಬರಹಗಳಲ್ಲಿ, ಕೆಲವು ಘಟನೆ ಮತ್ತು ಸಂಗತಿಗಳ ದೃಷ್ಟಿಯಿಂದ ಭಿನ್ನಳಾಗಿ ಹಾಗೂ ದ್ವಂದ್ವಳಾಗಿ ಕಾಣಸಿಗುತ್ತಾಳೆ. ಆದರೆ ಓಬವ್ವ ನಾಗತಿಯು ದುರ್ಗವನ್ನು ಎರಡು ವರ್ಷಗಳ ಕಾಲ ಆಳ್ವಿಕೆ ನಡೆಸಿದ ವೀರ ಮಹಿಳೆ, ದಕ್ಷ ಆಡಳಿತಗಾರ್ತಿ, ರಾಜಕೀಯ ನಿಪುಣತೆಯನ್ನು ಹೊಂದಿದವಳು ಎಂಬುದು ತಿಳಿದುಬರುತ್ತದೆ.

**ಕೊನೆ ಟಿಪ್ಪಣಿಗಳು:**

1. ಪುಟ್ಟಣ್ಣ ಎಂ.ಎಸ್., (1997), ಚಿತ್ರದುರ್ಗದ ಪಾಳೆಯಗಾರರು, ಕಾವ್ಯಾಲಯ ಪ್ರಕಾಶ, ಜಯನಗರ, ಪು.ಸಂ 60–61
2. ಅದೇ, ಪು.ಸಂ. 61
3. ಸುಬ್ಬರಾಯ ತ.ರಾ., (1987), ದುರ್ಗಾಸ್ತಮಾನ, ಹೇಮಂತ ಪ್ರಕಾಶನ, ಬೆಂಗಳೂರು, ಪು.ಸಂ. 101
4. ಅದೇ, ಪು.ಸಂ. 104
5. ಅದೇ, ಪು.ಸಂ. 104
6. ಅದೇ, ಪು.ಸಂ. 113
7. ಅದೇ, ಪು.ಸಂ. 114
8. ಅದೇ, ಪು.ಸಂ. 115
9. ಗಿರಿಜಾ ಟಿ., (2013), ದುರ್ಗದ ನಾಗತಿಯರು, ಲಕ್ಷ್ಮೀ ಮುದ್ರಣಾಲಯ, ದಾವಣಗೆರೆ, ಪು.ಸಂ. 54
10. ಅದೇ, ಪು.ಸಂ. 56
11. ಲಕ್ಷ್ಮಣ್ ತೆಲಗಾವಿ, (2022), ಸುಹೃದ ಸ್ಫುರಣ, ರವಿದಾಸ ಪ್ರಕಾಶನ, ಧಾರವಾಡ, ಪು. 342
12. ಅದೇ, ಪು.ಸಂ. 342
13. ಅದೇ, ಪು.ಸಂ. 342
14. ಅದೇ, ಪು.ಸಂ. 343

**ಪರಾಮರ್ಶನ ಗ್ರಂಥಗಳು:**


1. ಗಿರಿಜಾ ಟಿ., (2013), ದುರ್ಗದ ನಾಗತಿಯರು, ಲಕ್ಷ್ಮೀ ಮುದ್ರಣಾಲಯ, ದಾವಣಗೆರೆ.
2. ಪುಟ್ಟಣ್ಣ ಎಂ.ಎಸ್., (1997), ಚಿತ್ರದುರ್ಗದ ಪಾಳೆಯಗಾರರು, ಕಾವ್ಯಾಲಯ ಪ್ರಕಾಶ, ಜಯನಗರ.
3. ಮೀರಾಸಾಬಿಹಳ್ಳಿ ಶಿವಣ್ಣ (ಸಂ), (2020), ದುರುಗ ಸೀಮೆ ಜಾನಪದ, ಪಟೇಲ್ ಪ್ರತಿಷ್ಠಾನ, ಬೆಂಗಳೂರು.
4. ಸುಬ್ಬರಾಯ ತ.ರಾ., (1987), ದುರ್ಗಾಸ್ತಮಾನ, ಹೇಮಂತ ಪ್ರಕಾಶನ, ಬೆಂಗಳೂರು.
5. ರಾಜಶೇಖರಪ್ಪ ಬಿ., (2001), ಇತಿಹಾಸ ಕಥನ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.
6. ರಾಜಶೇಖರಪ್ಪ ಬಿ., (2009), ದುರ್ಗಶೋಧನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
7. ರಾಜಶೇಖರಪ್ಪ ಬಿ., (2016), ಪ್ರಾಚೀನ ಚಿತ್ರದುರ್ಗ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ, ಚಿತ್ರದುರ್ಗ.
8. ಲಕ್ಷ್ಮಣ್ ತೆಲಗಾವಿ, (2022), ಸುಹೃದ ಸ್ಫುರಣ, ರವಿದಾಸ ಪ್ರಕಾಶನ, ಧಾರವಾಡ.
9. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ., (1976), ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ.
10. ಸವಿತ ಎಸ್., (2015), ತರಾಸು ಅವರ ಐತಿಹಾಸಿಕ ಕಾದಂಬರಿಗಳಲ್ಲಿ ಮಹಿಳೆ, ಯುಕ್ತ ಪ್ರಕಾಶನ, ಚಿತ್ರದುರ್ಗ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.